ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.575/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಲಕ್ಷ್ಮೀ** | | |
| **ಗಂಡನ ಹೆಸರು** | **ಬಸಪ್ಪ** | **ಪಿಡಬ್ಲೂ:** | **1** |
| **ವಯಸ್ಸು** | **65 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗ:** | **ವ್ಯವಸಾಯ** | | |
| **ವಾಸ ಸ್ಥಳ:** | **ಸೋಮಲಾಪುರ.** | | |

**ದಿನಾಂಕ 22-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 3 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-4, 5 ನನ್ನ ಮಕ್ಕಳು, ಚಾಸಾ-6 ನನ್ನ ಗಂಡ, ಚಾಸಾ-7 & 8 ನನ್ನ ಮೈದುನರು. ಚಾಸಾ-9 ನನ್ನ ಮಾವ. ಆರೋಪಿತರು ನನಗೆ ಗೊತ್ತು.

ನಾನು ಓದಿಲ್ಲ ಆದ್ದರಿಂದ ದಿನಾಂಕ ಹೇಳಲು ಬರುವುದಿಲ್ಲ. ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 2 ಗಂಟೆಯ ಸುಮಾರಿಗೆ ನಾನು ನಮ್ಮ ಹೊಲದಲ್ಲಿ ಕಳೆ ತೆಗೆಯುತ್ತಿದ್ದೆ. ಆಗ ಚಾಸಾ-4 ರಿಂದ 7 ರವರು ಇದ್ದೆವು. ಆಗ ಆರೋಪಿತರು ಬಂದು, ಚಾಸಾ-4 ರವರನ್ನು ಕೇಳದೆ ನೀರನ್ನು ಬಿಟ್ಟುಕೊಂಡರು, ಆಗ ಚಾಸಾ-4 ರವರು ನನ್ನನ್ನು ಕೇಳದೆ ಹೇಗೆ ನೀರು ಬಿಟ್ಟರಿ ಎಂದು ಕೇಳಿದಾಗ, ಆರೋಪಿತರು ನಾನು ಕೇಳುವುದಿಲ್ಲ, ಹೊಲದ ಮಾಲೀಕರನ್ನು ಕೇಳಿದ್ದೇನೆ, ನೀನು ಏನು ಸಂಬಂಧ ಎಂದು ಹೇಳಿ ಜಗಳ ತೆಗೆದರು. ನಂತರ ಆರೋಪಿತರು ಚಾಸಾ-4 ರಿಂದ 7 ರವರಿಗೆ

ಹೊಡೆದಿರುತ್ತಾರೆ. ನಂತರ ನಾನು ಬಿಡಿಸಲು ಹೋದಾಗ ನನ್ನನ್ನು ನೂಕಿ, ನೀನೇಕೆ ಬರುತ್ತೀ ಎಂದು ಬೈದಿರುತ್ತಾರೆ. 1 ನೇ ಆರೋಪಿ ಕುಡುಗೋಲಿನಿಂದ ನನ್ನ ಮಕ್ಕಳಿಗೆ ಹೊಡೆದಿರುತ್ತಾನೆ.

ಸಾಕ್ಷಿಯು ಕುಡುಗೋಲನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಪೋಲೀಸರು ನನ್ನನ್ನು ಹೊಲದಲ್ಲಿ ಮತ್ತು ಇಲ್ಲಿ ಬಂದು ವಿಚಾರಣೆ ಮಾಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ ಬಗ್ಗೆ ನೀವು ದಿ.05-11-2022 ರಂದು ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಿರಿ ಎಂದರೆ ಸರಿ. ದಿ.04-11-2022 ರಂದು ಮಧ್ಯಾಹ್ನ 12-20 ಗಂಟೆಗೆ ನೀವು ಲೀಸ್ ಮಾಡಿದ ವೀರೇಶ್‌ರವರ ಹೊಲದಲ್ಲಿದ್ದಾಗ, 1 ನೇ ಆರೋಪಿ ನಿಮಗೆ ಹೇಳದೇ ನೀರನ್ನು ಬಿಟ್ಟುಕೊಂಡಿದ್ದ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಆರೋಪಿತರು ನಮ್ಮ ಹತ್ತಿರ ಬಂದು ನಿನ್ನದೇನಲೇ ಸೂಳೆ ಮಗನೆ, ನಾವು ವೀರೇಶನನ್ನು ಕೇಳಿದ್ದೇವೆ ಎಂದು ಬೈದಿದ್ದರು ಎಂದರೆ ಸರಿ. ಚಾಸಾ-4 ರವರು ನಾನು ವೀರೇಶ್‌ನ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದಾಗ, 1 ನೇ ಆರೋಪಿ ನಿನ್ನದೇನಲೇ ಸೂಳೆ ಮಗನೆ ಎಂದು ಬೈದು ಹೊಡೆದು, ಚಾಸಾ-4 ರವರ ಎದೆ ಮೇಲಿನ ಅಂಗಿಯನ್ನು ಹಿಡಿದು ಎಳೆದನು ಎಂದರೆ ಸರಿ. ಬಿಡಿಸಲು ಬಂದ ಚಾಸಾ-5 ರವರಿಗೂ ಹೊಡೆದನು, ಅದರಿಂದ ಅವರ ಹೆಬ್ಬೆಟ್ಟಿಗೆ ಗಾಯವಾಗಿತ್ತು ಎಂದರೆ ಸರಿ. ನಂತರ ನನಗೆ ಮತ್ತು ನನ್ನ ಮೈದುನ ಮತ್ತು ಮಗನಿಗೆ ಒಳಪೆಟ್ಟಾಗಿತ್ತು ಎಂದರೆ ಸರಿ. ನಂತರ ಚಾಸಾ-8 & 9 ರವರು ಜಗಳ ಬಿಡಿಸಿದ್ದರು ಎಂದರೆ ಸರಿ. ಆರೋಪಿತರೆಲ್ಲರೂ ಇನ್ನು ಮುಂದೆ ಊರಲ್ಲಿ ನಮಗೆ ಎದುರಾಗಿ ಹೇಗೆ ಜೀವನ ಮಾಡುತ್ತೀರಿ ಎಂದು ಜೀವದ ಬೆದರಿಕೆ ಹಾಕಿದ್ದರು ಎಂದರೆ ಸರಿ. ನಂತರ 1 ನೇ ಆರೋಪಿ ಕೈಯಲ್ಲಿದ್ದ ಕುಡುಗೋಲನ್ನು ಅಲ್ಲಿಯೇ ಬಿಸಾಕಿ ಹೋಗಿದ್ದನು ಎಂದರೆ ಸರಿ. ಚಾಸಾ-5 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಂತರ ನಾನು ದೂರು ಕೊಟ್ಟಿದ್ದೆನು ಎಂದರೆ ಸರಿ. ಚಾಸಾ-4 & 7 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದವು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದು ಹೇಳಿದ್ದೆ ಎಂದರೆ ಸರಿ.

**ಪಾಟೀಸವಾಲುಃ ಶ್ರೀ.ಎಂ. ಎ. ಜಿ. ಆರೋಪಿ ಪರ ವಕೀಲರಿಂದಃ**

1. ವೀರೇಶ್ ರವರ ಹೊಲವನ್ನು ನಾವು ಮಾಡುವುದಕ್ಕಿಂತ ಮುಂಚೆ ಆರೋಪಿತರು ಮಾಡುತ್ತಿದ್ದರು ಎಂದರೆ ಸರಿ. ಆರೋಪಿತರು ಹೊಲ ಮಾಡುವ ಕಾಲಕ್ಕೆ ಬೋರನ್ನು ಹಾಕಿದ್ದರು ಎಂದರೆ ಸಾಕ್ಷಿಯು ಈಗ ಹೊಸದಾಗಿ ಬೋರ್ ವೆಲ್ ಹಾಕಿಸಿದ್ದಾರೆ ಎನ್ನುತ್ತಾರೆ.

2. 1ನೇ ಆರೋಪಿ ಹೊಲದ ಮಾಲೀಕರಿಗೆ ನೀರನ್ನು ಬಿಡುವಂತೆ ಕೇಳಿದ್ದ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಮಗ ನೀನು ನನಗೆ ಕೇಳದೇ ನೀರನ್ನು ಹೇಗೆ ತೆಗೆದುಕೊಂಡೆ ಎಂದು 1ನೇ ಆರೋಪಿ ಕೇಳಿದ್ದ. ಸದರಿ ಹೊಲಕ್ಕೆ ವೀರೇಶ್ ಮಾಲೀಕ ಎಂದರೆ ಸರಿ. ವೀರೇಶ್ ಒಪ್ಪಿಕೊಂಡ ನಂತರ 1ನೇ ಆರೋಪಿ ಹೊಲಕ್ಕೆ ನೀರು ಹರಿಸಿಕೊಳ್ಳಲು ಹೋಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಹೊಲ ಒಣಗಿದರೆ ಏನು ಮಾಡುವುದು ಎನ್ನುತ್ತಾರೆ. ಚಾಸಾ-4 ರಿಂದ 7 ರವರು ಆರೋಪಿತರನ್ನು ಬಡೆದಿರುತ್ತಾರೆ ಎಂದರೆ ಸಾಕ್ಷಿಯು ಅವರೇ ನಮ್ಮನ್ನು ಬಡೆದಿದ್ದರು ಎಂದು ನುಡಿದು, ನಂತರದಲ್ಲಿ ಹೌದು ಎನ್ನುತ್ತಾರೆ.

3. ಆದ್ದರಿಂದ ಅದೇ ದಿನ 1ನೇ ಆರೋಪಿ ಚಾಸಾ-4 ರಿಂದ 7 ರವರ ವಿರುದ್ಧ ಸಿ.ಗ್ರಾ. ಠಾಣೆಯಲ್ಲಿ ದೂರು ದಾಖಲಿಸಿದ್ದ ಎಂದರೆ ಸರಿ. ಆದ್ದರಿಂದ ನೀವು ನಮ್ಮ ಮೇಲೆ ಕೇಸು ಆಗಿದೆ ಎಂದು ಮರುದಿನ ನೀವು ಹೋಗಿ ದೂರು ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಹೌದು ನನ್ನ ಮಕ್ಕಳನ್ನು ಹೊಡೆದಿದ್ದರು ಆದ್ದರಿಂದ ದೂರು ಕೊಟ್ಟಿದ್ದೆ ಎನ್ನುತ್ತಾರೆ.

4. ಗುನ್ನಾ ಸ್ಥಳದ ಪೂರ್ವಕ್ಕೆ ಶೇಖರಯ್ಯಸ್ವಾಮಿ ರವರ ಹೊಲ, ಪಶ್ಚಿಮಕ್ಕೆ ಬಸಪ್ಪ ರವರ ಹೊಲ, ಉತ್ತರಕ್ಕೆ ನಿಮ್ಮ ಹೊಲ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ರಸ್ತೆಯ ನಂತರ ಅಂಬಣ್ಣ, ದುರುಗಪ್ಪ, ಶಿವಣ್ಣನ ಹೊಲಗಳು ಇವೆ ಎಂದರೆ ಸರಿ. ನಿಮ್ಮ ಹೊಲದ ದಕ್ಷಿಣಕ್ಕೆ ಇರುವ ರಸ್ತೆಯಲ್ಲಿಯೇ ಎಲ್ಲರೂ ಓಡಾಡುತ್ತಾರೆ ಎಂದರೆ ಸರಿ. ಆಗ ಸುಗ್ಗಿಯ ಕಾಲ, ಎಲ್ಲರೂ ತಮ್ಮ ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ.

5. ಜಗಳವಾದಾಗ ಸುತ್ತಮುತ್ತ ಹೊಲದವರು, ದಾರಿ ಹೋಕರು ಜಗಳ ಬಿಡಿಸಲು ಬಂದಿರುತ್ತಾರೆ ಎಂದರೆ ಸಾಕ್ಷಿಯು ಯಾರೂ ಬಂದಿಲ್ಲ, ನೋಡುತ್ತಿದ್ದರು ಎನ್ನುತ್ತಾರೆ. ಅವರುಗಳ ಹೆಸರುಗಳನ್ನು ಹೇಳಲು ಬರುವುದಿಲ್ಲ. ನಾನು ಗುನ್ನಾ ಜಮೀನಿನ ಪಶ್ಚಿಮಕ್ಕೆ ಇರುವ ನನ್ನ ಗಂಡನ ಹೆಸರಿಲ್ಲಿರುವ ನಮ್ಮ ಸ್ವಂತ ಹೊಲದಲ್ಲಿ ಕಳೆ ತೆಗೆಯುತ್ತಿದ್ದೆ. ಆಗ ನಾನು, ಚಾಸಾ-4 ರಿಂದ 7 ರವರು ಇದ್ದೆವು. ಆಗ ಆರೋಪಿತರೆಲ್ಲರೂ ಅಲ್ಲಿಗೆ ಬಂದಿದ್ದರು. ಅಲ್ಲಿಯೇ ಅಂದರೆ ನಮ್ಮ ಸ್ವಂತ ಜಮೀನಿನಲ್ಲಿ ಜಗಳ ಆಗಿತ್ತು. ನಾವು ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಇದ್ದೆವು. ಜಗಳದಲ್ಲಿ ಯಾರು ಯಾರಿಗೆ ಏನೆಂದು ಬೈದರು, ಹೊಡೆದರು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ.

6. ಆರೋಪಿತರೆಲ್ಲರಿಗೂ ಗಾಯಗಳಾಗಿದ್ದವು, ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ ಸಾಕ್ಷಿಯು ಏನು ಗಾಯಗಳಾಗಿಲ್ಲ, ಅವರೇ ನಮ್ಮನ್ನು ಬಡೆದಿದ್ದರು ಎನ್ನುತ್ತಾರೆ. 1 ನೇ ಆರೋಪಿಯ ಎಡಗಣ್ಣಿಗೆ ಚಾಸಾ-4 ರಿಂದ 7 ರವರು ಹೊಡೆದಿದ್ದರಿಂದ ಭಾರೀ ಗಾಯವಾಗಿತ್ತು ಎಂದರೆ ಸರಿ.

7. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಶಾಲೆ ಕಲಿತಿಲ್ಲ, ನಿಪಿ-1 ನ್ನು ಯಾರು, ಎಲ್ಲಿ ತಯಾರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಗಂಡ ಮತ್ತು ಮಕ್ಕಳು ಹೆಬ್ಬಟ್ಟು ಹಾಕಲು ಹೇಳಿದ್ದರಿಂದ ನೀವು ಹೆಬ್ಬಟ್ಟಿನ ಗುರುತನ್ನು ಹಾಕಿದ್ದೀರಿ ಎಂದರೆ ಸರಿ. ಚಾಸಾ-4 ರಿಂದ 7 ಮತ್ತು ನಾನು ಠಾಣೆಗೆ ಹೋಗಿದ್ದೆವು. ಘಟನೆಯ ದಿನವೇ ನಾನು ಠಾಣೆಗೆ ಹೋಗಿ ದೂರು ಕೊಟ್ಟಿದ್ದೆವು ಎಂದರೆ ಸರಿ. ನಾವು ಘಟನೆಯಾದ ದಿನ 9 ಗಂಟೆಗೆ ಅಲ್ಲಿದ್ದೆವು. ಠಾಣೆಯಲ್ಲಿ 1 ತಾಸಿನ ಕಾಲ ಇದ್ದೆವು, ತದನಂತರ ಪೋಲೀಸರನ್ನು ಭೇಟಿಯಾಗಿಲ್ಲ, ಹೇಳಿಕೆ ಕೊಟ್ಟಿರುವುದಿಲ್ಲ.

8. 1 ನೇ ಆರೋಪಿ ಚಾಸಾ-5 ರವರಿಗೆ ಕುಡುಗೋಲಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-4 ರಿಂದ 7 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಬಿಡಿಸಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ, ಕಟ್ಟು ಕಥೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಕೇಸು ಮಾಡಿದ್ದರಿಂದ ನಾವು ಈ ಕೇಸನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 3 ನೇ ಆರೋಪಿ ನಿಮಗೆ ಬೈದಿಲ್ಲ, ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-8 & 9 ರವರು ಬಿಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**